ನನಗೆಂದು ಕೊಟ್ಟಿದ್ದ ರೂಮಿನಲ್ಲಿ ಮಲಗೇಳುವಷ್ಟರಲ್ಲಿ ಸಾಮಾನುಗಳನ್ನೆಲ್ಲ ಕಾರಿಗೆ ಸಾಗಿಸಿದ್ದರು. ಡ್ರೈವರ್ ರೆಡಿಯಾಗಿ ಕಾಯುತ್ತಿದ್ದ. ರುದ್ರಪ್ರತಾಪರೆಡ್ಡಿಯವರು, 'ಜೋಪಾನ ನಂದೂ... ಶಿವು ಹುಷಾರು. ಬೇಗ ಎಂ.ಎಸ್. ಮುಗುಸ್ಕೊಂಡ್ ಬನ್ನಿ. ಕೆಲಸ–ಗಿಲಸಕ್ಕೆ ತಲೆ ಕೆಡಿಸ್ಕೋಬೇಡಿ. ಬಂದು ಮದ್ವೆ ಮಾಡ್ಕೊಂಡು ಫ್ಯಾಕ್ಟ್ರಿ ನೋಡ್ಕೊಂಡ್ರೆ ಆಯ್ತು' ಅಂದರು. ಗಲಿಬಿಲಿಗೊಳಗಾದರೂ, 'ಆಮೇಲೆ ತಾನೆ, ನೋಡಿಕೊಳ್ಳೋಣ' ಎಂಬ ಭಾವ ಆವರಿಸಿ 'ಸರಿ ಮಾವ' ಎಂದು ಹೊರಟಿದ್ದೆ.

ಓದಿನ ಮಧ್ಯೆ ನಂದನಾರೆಡ್ಡಿ ವಿರಳವಾಗಿ ಸಿಗುತ್ತಿದ್ದಳು. ಯಾಕೋ ಅವಳು ನಾನು ನಿರೀಕ್ಷಿಸಿದಷ್ಟು ನನಗೆ ಹತ್ತಿರವಾಗಲಿಲ್ಲ. ಅಂದಚಂದದ ಆಕರ್ಷಣೆಗಳ ಕಾಲವನ್ನು ಮೀರಿ ಅಂತರಂಗದ ಆಪ್ತತೆಗಾಗಿ ತುಡಿಯುತ್ತಿದ್ದ ಮನಸ್ಸು–ಹೃದಯಗಳಿಗೆ ಅವಳ ಚರ್ಯೆ ನಡೆನುಡಿಗಳು ಪದೇ ಪದೇ ನಿರಾಶೆಯನ್ನು ತಂದೊಡ್ಡುತ್ತಿದ್ದವು.

ಪರೀಕ್ಷೆಗಳೆಲ್ಲ ಮುಗಿದವು. ಒಳ್ಳೆಯ ಕಂಪನಿಯಲ್ಲಿ ಕೆಲಸವೂ ಆಯ್ತು. ಅವಳೊಂದಿಗಿನ ನಿಶ್ಚಿತಾರ್ಥದ ಹೊಣೆಗಾರಿಕೆ ನನ್ನ ಮೇಲಿತ್ತು. ಮದುವೆಯಾದ ಮೇಲೆ ಸರಿಹೋದಾಳು! ಉಪೇಕ್ಷೆ, ಅನಾದರ, ನಿರಾಸಕ್ತಿಗಳ ವಲಯದಿಂದ ಹೊರಬಂದು ಆಪ್ತಳಾದಾಳೇನೋ ಎಂಬ ಹಂಬಲ ಒಳಗೊಳಗೆ ಹೆಡೆಯಾಡುತ್ತಿತ್ತು.

ಇಂಡಿಯಾಕ್ಕೆ ಬಂದು ಮದುವೆಯಾಗಿ ವಾಪಸ್ಸಾಗಬೇಕೆಂಬ ಇಂಗಿತವನ್ನು ನಾನಿನ್ನೂ ಯಾರಿಗೂ ಹೇಳಿರಲಿಲ್ಲ. ಸ್ವತಃ ನಂದನಾಳಿಗೂ. ಅಷ್ಟರಲ್ಲಿ ಅಮ್ಮ ಕಾಲುಜಾರಿ ಬಿದ್ದು ಸೊಂಟದ ಮೂಳೆ ಮುರಿದುಕೊಂಡರೆಂದು ಫೋನ್‌ಬಂತು. ಮಾವ ಒಳ್ಳೆಯ ಆಸ್ಪತ್ರೆಗೆ ಅಡ್ಮಿಟ್ ಮಾಡಿದ್ದರು. ಸಾಯುವ ವಯಸ್ಸಲ್ಲವೇ ಅಲ್ಲ ಅಮ್ಮನದು... ಬಿದ್ದಾಗ ಸಯಾಟಿಕ್ ನರ್ವ್ ತುಂಡಾಗಿ ಕೇವಲ ಹದಿನೈದು ದಿನ ಮಾತ್ರವಿದ್ದರು. ನನ್ನ ಮನಸ್ಸಿಗೆ ತೀರಾ ಕತ್ತಲೆ ಕವಿಯಿತು. ತನ್ನಿಡೀ ಬದುಕು ನನಗಾಗಿ ಚಟ್ನಿಪುಡಿ, ಚಕ್ಕುಲಿ, ಉಂಡೆ ಮಾಡಿಕೊಟ್ಟು ಸಂಪಾದಿಸಿ ಬದುಕಿದ ಅಮ್ಮ ನನ್ನ ಒಳ್ಳೆಯ ದಿನಗಳನ್ನು ಕಾಣಲೇ ಇಲ್ಲ ಎಂಬ ಕೊರಗು ನನ್ನೊಳಗೆ ತುಂಬಿತು. ದಿನ ಕರ್ಮಗಳು ಮುಗಿಸಿದ ಮೇಲೆ ಒಂದು ವರ್ಷ ನಾನು ಮದುವೆಯಾಗುವಂತಿಲ್ಲವೆಂದು ಹೇಳಿದಾಗ ಲೊಚಗುಟ್ಟಿ ಸಂತಾಪ ಸೂಚಿಸಿದ ಮಾವ ರುದ್ರಪ್ರತಾಪರೆಡ್ಡಿಯವರು, 'ನಿಜನಿಜ, ಪಾಪ... ಮದ್ವೆ ಮುಂದಿನ ವರ್ಷ ಮಾಡ್ಕೋಬಹುದು ಬಿಡಿ. ಆದ್ರೆ ನೀವೀಗ ಇಲ್ಲೇ ಇರ್ತೀರ ಅಥ್ವ ಅಮೆರಿಕಕ್ಕೆ ಹೋಗ್ತೀರ? ನನ್ನ ಕೇಳುದ್ರೆ ನೀವಿಲ್ಲೇ ಇದ್ದುಬಿಡಿ; ಫ್ಯಾಕ್ಟರೀಲಿ ಎಂ.ಡಿ ಪೋಸ್ಟ್ ಕೊಡ್ತೀನಿ' ಅಂದರು. 'ನಾನಿನ್ನೂ ಬ್ಯಾಂಕ್ ಸಾಲ ತೀರಿಸ್ಬೇಕಲ್ಲ' ಎಂದೆ ಮುಜುಗರದಿಂದ. 'ಅಯ್ಯೋ ಅದ್ಯಾವ ಮಹಾಸಾಲ ತಗೊಳ್ಳಿ... ನಾನಿಲ್ವ, ಯಾವ ಬ್ಯಾಂಕು ಹೇಳಿ' ಅಂತ ಬ್ಯಾಂಕಿನ ಸಾಲದ ವಿವರಗಳನ್ನು ಪಡಕೊಂಡರು. 'ನೋಡಿ, ನಂದೂನ ನಾನಿನ್ನು ಎಲ್ಲೂ ಕಳಿಸಲ್ಲ. ಇಲ್ಲೇ ಇರ್ತಾಳೆ; ನೀವು ಬೇಕಾದ್ರೆ ಮದ್ವೆ ಆದ್ಮೇಲೆ ಇಲ್ಲಿಗೇ ಬರ್ತೀರಂತೆ. ಈಗ ನಿಮ್ಮನೇಲೆ ಇದ್ದು, ಹೋಗಿಬಂದು ಫ್ಯಾಕ್ಟ್ರಿ ನೋಡ್ಕೊಳ್ಳಿ. ಅವಳೂ ಇಲ್ಲ... ಅಲ್ಲಿ ಹೋಗಿ ಏನ್ ಮಾಡ್ತೀರ' ಅಂದರು. ಮನಸ್ಸು ಡೋಲಾಯಮಾನವಾಗಿ ಹೊಯ್ದಾಡಿತು. ಅಮೆರಿಕದಲ್ಲಿ ಕೆಲವರ್ಷಗಳಾದರೂ ಇರಬೇಕೆನ್ನುವ ನನ್ನ ಹಂಬಲ ಮಣ್ಣುಗೂಡಿತು. ಕಷ್ಟದಿಂದ, 'ಹೂಂ ನೀವು ಹೇಳದಂಗೇ ಆಗ್ಲಿ' ಅಂದೆ. ನಮ್ಮ ಮನೆಯಲ್ಲಿದ್ದೆ ಅನ್ನುವುದೊಂದು ನೆಪ. ಬಹುತೇಕ ತಿಂಡಿ ಊಟಗಳೆಲ್ಲಾ ನಂದುವಿನ ಮನೆಯಲ್ಲೇ ನಡೆಯುತ್ತಿತ್ತು. ನಂದನಾ ಕೂಡ ಬೆಳಿಗ್ಗೆ ನನ್ನ ಜೊತೆಗೇ ಫ್ಯಾಕ್ಟರಿಗೆ ಬರುತ್ತಿದ್ದಳು. ಕಂಪನಿಯ ಸಿ.ಇ.ಓ. ಹುದ್ದೆಯನ್ನು ಅವಳಿಗೆ ಕೊಡಲಾಗಿತ್ತು. ಜೊತೆಯಲ್ಲಿ ಕೆಲಸ ಮಾಡುತ್ತಾ ಹೋದಂತೆ ನಂದನಾ ತೀರಾ ಅಂಜುಬುರುಕು ಹೆಣ್ಣೆಂದು ಗೊತ್ತಾಯಿತು. ಕಂಪನಿಗೆ ಸಂಬಂಧಿಸಿದ ನಿರ್ಧಾರಗಳಿಗೆ ಅವಳು ನನ್ನನ್ನೋ ಅಥವಾ ಅವಳ ತಂದೆಯನ್ನೋ ಅವಲಂಬಿಸುತ್ತಿದ್ದಳು. ಕಡೆಕಡೆಗೆ ನಾವೆಲ್ಲಾ ತಯಾರಿಸಿಟ್ಟ ಫೈಲುಗಳಿಗೆ ಸಹಿ ಮಾಡುವುದು, ಮೀಟಿಂಗ್‌ಗಳಲ್ಲಿ ಅಲಂಕಾರ ವಿದ್ಯಾರ್ಥಿಯಂತೆ